Mr. SPEAKER.—The first thing is that I do not want to eat into the little time that is available to the House during the question hour. I will give a ruling later.

Sri AZEEZ SAIT.—I will not interrupt the Speaker now. I will make my submission after the Question Hour.

Project Allowance to Teachers

*Q.—667. Sri M. NAGAPPA (Raichur).—

Will the Minister for Education be pleased to state :—

(*a*) whether the project allowance and other amenities are granted to the teachers working in project area unlike the other Government servants ;

(*b*) if so, the reasen for such discrimination ;

(*c*) whether the same is under the consideration of Government and if so, since when ;

(*d*) when the same would be sanctioned ?

A.—Sri S. R. KANTHI (Minister for Law) [on behalf of Sri K. V. Shankara Gowda (Minister for Education)].—

(*a*) Yes ; on the merits of each case.

(*b*), (*c*) and (*d*) Do not arise in view of reply to clause (*a*).

ಶ್ರೀ ಎಂ. ನಾಗಪ್ಪ.—(ಅ) ಪ್ರಶ್ನೆಗೆ ಉತ್ತರವಾಗಿ ಪ್ರತಿ ಸಂದರ್ಭದ ಅರ್ಹತೆ ಮೇರೆಗೆ ಯೋಜನಾ ಭತ್ಯ ಮತ್ತು ಸೌಲಭ್ಯ ಕೊಡಲಾಗಿದೆ ಎಂದು ತಿಳಿಸಿದೆ. ಆ ಅರ್ಹತೆ ಎಂದರೆ ಯಾವುದು ?

†ಶ್ರೀ ಎಸ್. ಆರ್. ಕಂಠಿ.—ಇದಕ್ಕೆ ಕೆಲವು ನಿಯಮಗಳಿವೆ, ಅದರ ಪ್ರಕಾರ ಕೆಲವು ಕಡೆ ಬಹಳ ಅನಾನುಕೂಲವಿರುತ್ತದೆ. ಅದನ್ನು ನೋಡಿ ಕೊಡಲಾಗುವುದು.

ಶ್ರೀ ಎಂ. ನಾಗಪ್ಪ.—ಹೈದರಾಬಾದು ಪ್ರದೇಶದ ರಾಯಚೂರು ಜಿಲ್ಲೆಯಲ್ಲಿ ಮುನಿರಾಬಾದು, ಒಡ್ಡರಹಟ್ಟಿ ಮುಂತಾದ ಮೂರು ಜಾಗಗಳಲ್ಲಿರುವ ಉಪಾಧ್ಯಾಯರಿಗೆ ಈ ಅನುಕೂಲ ವಿದ್ದುದನ್ನು ಮೈಸೂರು ಸರಕಾರಕ್ಕೆ ಬಂದಮೇಲೆ ನಿಲ್ಲಿಸಿದೆ, ಈ ವಿಚಾರದಲ್ಲಿ ಸೂಕ್ತ ಕ್ರಮ ತೆಗೆದುಕೊಂಡಿದ್ದೀರಾ ?

Sri S. R. KANTHI.—The Hon'ble Member is giving information ; I will look into it.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇತರ ಇಲಾಖೆಗಳಲ್ಲಿ ಕೊಡುವಂತೆ ಭತ್ಯ ಉಪಾಧ್ಯಾಯರಿಗೂ ಕೊಡುತ್ತೀರೋ ಅಥವ ವ್ಯತ್ಯಾಸವಿದೆಯೋ ?

ಶ್ರೀ ಎಸ್. ಆರ್. ಕಂಠಿ.—ಅಷ್ಟೇ ಕೊಡುವುದು, ಹೆಚ್ಚು ಕೊಡುವುದಿಲ್ಲ.

ಶ್ರೀ ಎಂ. ನಾಗಪ್ಪ.—ಅಲ್ಲರುವ ಇತರ ಅಧಿಕಾರಿಗಳಿಗೆ ಪ್ರಾಜೆಕ್ಟ್ ಅಲೋಯನ್ಸ್ ಕೊಡುವಾಗ ಅದರಂತೆ ಉಪಾಧ್ಯಾಯರಿಗೆ ಕೊಡುವುದಕ್ಕೆ ಅವಕಾಶವಿಲ್ಲವೇ ? ಪಿ.ಡಬ್ಲ್ಯು. ಇಲಾಖೆಯಲ್ಲಿ ಕೊಡುವ ಹಾಗೆ ಉಪಾಧ್ಯಾಯರಿಗೂ ಏಕೆ ಕೊಡಬಾರದು ?

ಶ್ರೀ ಎಸ್. ಆರ್. ಕಂಠಿ.—ಕೆಲವು ವರ್ಷಗಳಿಂದ ಈ ಪ್ರಶ್ನೆ ಇತ್ಯರ್ಥವಾಗದೆ ಉಳಿದಿದೆ, ಈಗ ಒಡ್ಡರಹಟ್ಟಿ ವಿಚಾರ ಕೇಳಿದ್ದೀರಿ, ಅದನ್ನು ವಿಚಾರ ಮಾಡುತ್ತೇವೆ.